ಪ್ರತಿ [redacted]

ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ಕಾಯಿದೆ 2009, ಹಾಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ನಿಯಮಗಳು 2012, ಹಿನ್ನೆಲೆಯಲ್ಲಿ ನಮ್ಮ ರಾಜ್ಯದಲ್ಲಿ ಜಾರಿಯಲ್ಲಿರುವ ಕರ್ನಾಟಕ ಗ್ರಾಮ ಪಂಚಾಯತಿಗಳ (ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳು) (ಮಾದರಿ) ಉಪ ವಿಧಿಗಳು 2006 ಕ್ಕೆ ಆಗಬೇಕಾದ ತಿದ್ದುಪಡಿಗಳು

| ಕ್ರ ಸಂ. | ಉಪವಿಧಿ ಸಂಖ್ಯೆ | ಹಾಲಿ ಇರುವುದು | ಆರ್.ಟಿ.ಇ. ಕಾಯಿದೆ ಹಿನ್ನೆಲೆಯಲ್ಲಿ ಇರಬೇಕಾದುದು | ಷರಾ |
|---|---|---|---|---|
| 1 | 1 ಎ | ಈ ಉಪವಿಧಿಗಳನ್ನು ಕರ್ನಾಟಕ ಗ್ರಾಮ ಪಂಚಾಯತಿಗಳ (ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳು) (ಮಾದರಿ) ಉಪ ವಿಧಿಗಳು 2006 ಎಂದು ಕರೆಯತಕ್ಕದ್ದು | ಈ ಉಪವಿಧಿಗಳನ್ನು ಕರ್ನಾಟಕ ಗ್ರಾಮ ಪಂಚಾಯತಿಗಳ (ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳು) (ಮಾದರಿ) ತಿದ್ದುಪಡಿ ಉಪ ವಿಧಿಗಳು 2012 ಎಂದು ಕರೆಯತಕ್ಕದ್ದು | ಆರ್.ಟಿ.ಇ ಕಾಯಿದೆ ಅನ್ವಯ |
| 2 | 1 ಬಿ | ಈ ಉಪವಿಧಿಗಳು ಸರ್ಕಾರಿ ರಾಜ್ಯ ಪತ್ರದಲ್ಲಿ ಪ್ರಕಟಣೆಯಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು | ಈ ತಿದ್ದುಪಡಿ ಉಪವಿಧಿಗಳು ಸರ್ಕಾರಿ ರಾಜ್ಯ ಪತ್ರದಲ್ಲಿ ಪ್ರಕಟಣೆಯಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು | |
| 3 | 2 ಡಿ | 2 ಪರಿಭಾಷೆಗಳು<br>ಡಿ. 'ಮಗು' ಎಂದರೆ VIII ನೇ ತರಗತಿವರೆಗೆ ಶಾಲಾ ಶಿಕ್ಷಣವನ್ನು ಪೂರ್ಣಗೊಳಿಸಿಲ್ಲದ 5 ರಿಂದ 14 ವರ್ಷಗಳ ವಯೋಮಿತಿಯ ಮಗು | 2 ಪರಿಭಾಷೆಗಳು<br>ಡಿ. 'ಮಗು' ಎಂದರೆ 6 ರಿಂದ 14 ವರ್ಷಗಳ ವಯೋಮಿತಿಯ ಗಂಡು ಅಥವಾ ಹೆಣ್ಣು ಮಗು. | ಆರ್.ಟಿ.ಇ. ಕಾಯಿದೆ ಕಲಂ 2 (ಸಿ) ಪ್ರಕಾರ |
| 4 | 3. ಬಿ. | (i) ತಂದೆ ತಾಯಿಯರ ಪರಿಷತ್ತು, ತಮ್ಮ ಪೈಕಿ ಒಂಭತ್ತು ಜನ ಪ್ರತಿನಿಧಿಗಳನ್ನು ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗೆ ಆಯ್ಕೆ ಮಾಡತಕ್ಕದ್ದು. ಆ ಒಂಭತ್ತು ಜನ ಪ್ರತಿನಿಧಿಗಳಲ್ಲಿ, ಕನಿಷ್ಠ ಮೂರು ಜನ ಮಹಿಳೆಯರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಮುದಾಯದಿಂದ ತಲಾ ಒಬ್ಬರು, ಮತ್ತು ಅಲ್ಪ ಸಂಖ್ಯಾತ ಸಮುದಾಯದ ಒಬ್ಬ ಪ್ರತಿನಿಧಿಯನ್ನು ಒಳಗೊಂಡಿರತಕ್ಕದ್ದು.<br>(ii) ಶಾಲೆಯ ಮುಖ್ಯ ಶಿಕ್ಷಕರು, ಆರೋಗ್ಯ ಕಾರ್ಯಕರ್ತ ಮತ್ತು ಅಂಗನವಾಡಿ ಶಿಕ್ಷಕಿ ಇವರು ಪದನಿಮಿತ್ತ ಸದಸ್ಯರಾಗಿರತಕ್ಕದ್ದು.<br>(iii) ಸಾಧ್ಯವಿರುವ ಕಡೆಗಳಲ್ಲಿ ಶಾಲೆಯ ಉನ್ನತ ತರಗತಿಯಿಂದ ಸಂಬಂಧಪಟ್ಟ ವಿದ್ಯಾರ್ಥಿಗಳು ಆಯ್ಕೆ | (1) ತಂದೆ ತಾಯಿಯರ ಪರಿಷತ್ತು, ತಮ್ಮ ಪೈಕಿ ಹದಿಮೂರು ಜನ ಪ್ರತಿನಿಧಿಗಳನ್ನು ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗೆ ಆಯ್ಕೆ ಮಾಡತಕ್ಕದ್ದು.<br>(2) ಇವರ ಜೊತೆಗೆ ಶಾಲೆಯ ಮುಖ್ಯ ಶಿಕ್ಷಕರು, ಆರೋಗ್ಯ ಕಾರ್ಯಕರ್ತ ಮತ್ತು ಅಂಗನವಾಡಿ ಶಿಕ್ಷಕಿ ಇವರು ಪದನಿಮಿತ್ತ ಸದಸ್ಯರಾಗಿರತಕ್ಕದ್ದು.<br>(3) ಉಳಿದ ಮೂವರು ಸದಸ್ಯರನ್ನು ಈ ಕೆಳ ಕಾಣಿಸಿದವರ ಪೈಕಿ ನಾಮನಿರ್ದೇಶನ ಮಾಡತಕ್ಕದ್ದು.<br>(ಅ) ಸ್ಥಳೀಯ ಜನ ಪ್ರತಿನಿಧಿಗಳ ಪೈಕಿ ಒಬ್ಬರನ್ನು ಸ್ಥಳೀಯ ಪ್ರಾಧಿಕಾರ ಆಯ್ಕೆ ಮಾಡತಕ್ಕದ್ದು.<br>(ಆ) ಶಾಲೆಯ ಶಿಕ್ಷಕರ ಪೈಕಿ ಒಬ್ಬರನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳು ನಾಮ ನಿರ್ದೇಶನ ಮಾಡುವುದು. | ಆರ್.ಟಿ.ಇ. ಕಾಯಿದೆ ಕಲಂ 21 (1) ಪ್ರಕಾರ<br><br>ನಿಯಮ 13 (1) ರಿಂದ 13 (3) |

ಪ್ರ.ತಿ.ನೋ

| ಕ್ರ ಸಂ. | ಉಪವಿಧಿ ಸಂಖ್ಯೆ | ಹಾಲಿ ಇರುವುದು | ಆರ್.ಟಿ.ಇ. ಕಾಯಿದೆ ಹಿನ್ನೆಲೆಯಲ್ಲಿ ಇರಬೇಕಾದುದು | ಷರಾ |
|---|---|---|---|---|
| | | ಮಾಡಿದ ಇಬ್ಬರು ವಿದ್ಯಾರ್ಥಿಗಳು ಎಂದರೆ, ಒಬ್ಬ ವಿದ್ಯಾರ್ಥಿ ಮತ್ತು ಒಬ್ಬ ವಿದ್ಯಾರ್ಥಿನಿ, ಇವರು ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯಲ್ಲಿ ವಿದ್ಯಾರ್ಥಿ ಪ್ರತಿನಿಧಿಗಳಾಗಿರತಕ್ಕದ್ದು | (4) ಸ್ಥಳೀಯ ಶಿಕ್ಷಣ ತಜ್ಞರು, ಸ್ಥಳೀಯ ದಾನಿಗಳು ಮತ್ತು ಶಾಲೆಯ ವಿದ್ಯಾರ್ಥಿ ಇವರುಗಳ ಪೈಕಿ ಒಬ್ಬರನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳು ನಾಮ ನಿರ್ದೇಶನ ಮಾಡತಕ್ಕದ್ದು<br>ಒಟ್ಟು 19 ಸದಸ್ಯರ ಪೈಕಿ 10 ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿಡತಕ್ಕದ್ದು. ಜೊತೆಗೆ ಪ.ಜಾತಿ. ಪ.ಪಂಗಡ ಮತ್ತು ದುರ್ಬಲ ವರ್ಗದವರಿಗೆ ಸೂಕ್ತ ಪ್ರಾತಿನಿಧ್ಯವನ್ನು ನೀಡತಕ್ಕದ್ದು. | |
| 5 | 12 | 12 ಕೋರಂ–<br>ಎ. ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಸಭೆಯನ್ನು ನಡೆಸುವುದಕ್ಕೆ ಅಗತ್ಯವಾದ ಕೋರಂ ಈ ಮುಂದಿನಂತಿರತಕ್ಕದ್ದು:<br>i. ಅಧ್ಯಕ್ಷ ಅಥವಾ ಉಪಾಧ್ಯಕ್ಷರೂ ಸೇರಿದಂತೆ ತಂದೆ ತಾಯಿಯರ ಪರಿಷತ್ತಿನ ಒಂಭತ್ತು ಮಂದಿ ಚುನಾಯಿತ ಪ್ರತಿನಿಧಿಗಳ ಪೈಕಿ ಕನಿಷ್ಠಪಕ್ಷ ಐದು ಮಂದಿ ಸದಸ್ಯರು<br>ii. ಪದನಿಮಿತ್ತ, ವಿದ್ಯಾರ್ಥಿ ಮತ್ತು ನಾಮ ನಿರ್ದೇಶಿತ ಪ್ರವರ್ಗಗಳಿಂದ ಕನಿಷ್ಠಪಕ್ಷ ತಲಾ ಒಬ್ಬ ಸದಸ್ಯ | 12 ಕೋರಂ–<br>ಎ. ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಸಭೆಯನ್ನು ನಡೆಸುವುದಕ್ಕೆ ಅಗತ್ಯವಾದ ಕೋರಂ ಈ ಮುಂದಿನಂತಿರತಕ್ಕದ್ದು:<br>i. ಅಧ್ಯಕ್ಷ ಅಥವಾ ಉಪಾಧ್ಯಕ್ಷರೂ ಸೇರಿದಂತ ತಂದೆ ತಾಯಿಯರ ಪರಿಷತ್ತಿನ ಹದಿಮೂರು ಮಂದಿ ಚುನಾಯಿತ ಪ್ರತಿನಿಧಿಗಳ ಪೈಕಿ ಕನಿಷ್ಠಪಕ್ಷ ಏಳು ಮಂದಿ ಸದಸ್ಯರು ಹಾಜರಿರತಕ್ಕದ್ದು.<br>ii. ಪದನಿಮಿತ್ತ ಸದಸ್ಯರಲ್ಲಿ ಒಬ್ಬರು ವಿದ್ಯಾರ್ಥಿ, ಉಳಿದ ಇಬ್ಬರು ನಾಮ ನಿರ್ದೇಶಿತ ಪ್ರತಿನಿಧಿಗಳ ಪೈಕಿ ಒಬ್ಬರು ಹಾಜರಿರತಕ್ಕದ್ದು. | ಹೊಸ ಕಾಯಿದೆ ಮತ್ತು ನಿಯಮಗಳ ಪ್ರಕಾರ ಸದಸ್ಯರ ಸಂಖ್ಯೆ ಹೆಚ್ಚಿಸಿರುವುದರಿಂದ ಕೋರಂ ಹೆಚ್ಚಿಸುವುದು ಸೂಕ್ತ. |

ಷರಾ:– ಈ ಮೇಲ್ಕಂಡ ಉಪ ವಿಧಿಗಳನ್ನು ಹೊರತುಪಡಿಸಿ ಉಳಿದಂತೆ ಕರ್ನಾಟಕ ಗ್ರಾಮ ಪಂಚಾಯತಿಗಳ (ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳು) (ಮಾದರಿ) ಉಪ ವಿಧಿಗಳು 2006, ಈ ಮಾದರಿ ಉಪ ವಿಧಿಗಳನ್ನು ಯಥಾವತ್ ಮುಂದುವರಿಸಬಹುದು.